<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ.ಸಂಖ್ಯೆ:**21/2025**</u>

<u>ಪಿರ್ಯಾದಿ</u> : ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸ್ ಠಾಣೆ,
ಮೂಡಿಗೆರೆ ತಾಲ್ಲೂಕು.

ವಿರುದ್ಧ

<u>ಆರೋಪಿತರು</u> :**1.** ದರ್ಶನ್.ಎಂ.ಬಿ **(**ಕಾನೂನು ಸಂಘರ್ಷಕ್ಕೊಳಗಾದ ಬಾಲಕ**)**
ವಯಸ್ಸು ಸುಮಾರು 17 ವರ್ಷ,
ಬಿನ್ ದಿಃ ಮೂರ್ತಿ.

**2.** ಲೀಲಾ ವಯಸ್ಸು ಸುಮಾರು 48 ವರ್ಷ,
ಕೋಂ ಮೂರ್ತಿ.

ಇಬ್ಬರ ವಾಸಃ ಬಾಪುನಗರ, ಹೆಸ್ಗಲ್ ಗ್ರಾಮ,
ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ತಾಲ್ಲೂಕು.

<u>ಆಪಾದನೆಯ ಸಾರಾಂಶ.</u>

ಶ್ರೀ. ವಿಶ್ವನಾಥ್ ಎ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ದಿನಾಂಕ 30.04.2024 ರಂದು ಸಂಜೆ 4.40 ರ ಸಮಯದಲ್ಲಿ ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಮೂಡಿಗೆರೆ ಪಟ್ಟಣದ ಗಂಗನಮಕ್ಕಿ ಪೆಟ್ರೋಲ್ ಬಂಕ್ ಮುದೆ ಹಾದು ಹೋಗಿರುವ ಎನ್.ಹೆಚ್-173 ಟಾರು ರಸ್ತೆಯಲ್ಲಿ 2 ನೇ ಆರೋಪಿಯಾದ ನೀವು ನಿಮ್ಮ ವಾಹನ ನೋಂದಣಿ ಸಂಖ್ಯೆ ಕೆಎ-18-ಇಎಲ್-8561 ನೇ ಬಜಾಜ್ ಪಲ್ಸರ್ ಮೋಟಾರ್ ಸೈಕಲ್ ಅನ್ನು ಚಾಲನಾ ಪರವಾನಗಿ ಇಲ್ಲದ ಈ ಪ್ರಕರಣದ ಕಾನೂನು ಸಂಘರ್ಷಕ್ಕೊಳಗಾದ ಬಾಲಕ ದರ್ಶನ್ ಗೆ ಚಾಲನೆ ಮಾಡಲು ನೀಡಿದ್ದು, ಸದರಿ ಬಾಲಕನು ಮೋಟಾರ್ ಸೈಕಲ್ ಅನ್ನು ಮೂಾಡಿಗೆರೆಯ ಹ್ಯಾಂಡ್ ಪೋಸ್ಟ್ ಕಡೆಯಿಂದ ಮೂಡಿಗೆರೆ ಪಟ್ಟಣದ ಕಡೆಗೆ ಅತೀವೇಗ ನಿರ್ಲಕ್ಷ್ಯತನ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಮೂಡಿಗೆರೆ ಪಟ್ಟಣದ ಕಡಯಿಂದ ತನ್ನ ಊರಿಗೆ ಹೋಗುವ ಸಲುವಾಗಿ ಮೂಡಿಗೆರೆ ಹ್ಯಾಂಡ್ ಪೋಸ್ಟ್ ಕಡೆಗೆ ಚಾಸಾ8-ಸುಮಾ ರವರ ಗಂಡನಾದ ರಮೇಶ್ ರವರು ಚಾಲನೆ ಮಾಡುತ್ತಿದ್ದ ವಾಹನ ನೋಂದಣಿ ಸಂಖ್ಯೆ ಕೆಎ-18-ಇಹೆಚ್-5527 ನೇ ಹೋಂಡಾ ಡಿಯೋ ಸ್ಕೂಟರ್ ಗೆ ಡಿಕ್ಕಿಪಡಿಸಿದ ಪರಿಣಾಮ ರಮೇಶ್ ರವರು ಸ್ಕೂಟರ್ ಸಮೇತ ರಸ್ತೆ ಮೇಲೆ ಬಿದ್ದಿದ್ದರಿಂದ ರಮೇಶ್ ರವರ ತಲೆಗೆ, ಮೈ-ಕೈ-ಕಾಲುಗಳಿಗೆ ತೀವ್ರ ಸ್ವರೂಪದ ರಕ್ತಗಾಯಗಳಾದ ಪರಿಣಾಮ, ಸದರಿಯವರನ್ನು ಮೂಡಿಗೆರೆ ಸರ್ಕಾರಿ

ಆಸ್ಪತ್ರೆಗೆ ದಾಖಲಿಸಿ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಸದೇ ದಿನಾಂಕ 06.05.2024 ರಂದು ಮಧ್ಯಾಹ್ನ 1.03 ರ ಸಮಯದಲ್ಲಿ ರಮೇಶ್ ರವರು ಮೃತಪಟ್ಟಿರುತ್ತಾರೆ. ಈ ರೀತ್ಯಾ 2 ನೇ ಆರೋಪಿಯಾದ ನೀವು ವಾಹನ ಕಾಯಿದೆ ಕಲಂ **180** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

2 ನೇ ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

2 ನೇ ಆರೋಪಿಯ ಉತ್ತರಃ

(ಆರೋಪಿಗೆ ದಿನಾಂಕ 07.07.2025 ರಂದು ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

Sd/-

ಮೂಡಿಗೆರೆ
ದಿನಾಂಕಃ 07.07.2025.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.